ಪುಸ್ತಕವನ್ನು ಟೇಬಲ್ ಮೇಲೆ ಒಗೆದು ಅವಳನ್ನು ಎತ್ತಿ ಮಂಚದ ಮೇಲೆ ಮಲಗಿಸಿ ಇಡಿಯಾಗಿ ಆಕ್ರಮಿಸುತ್ತಿದ್ದ. ದೇಹದೊಂದಿಗೆ ದೇಹ ಬೆಸೆದು ತಮ್ಮಿಬ್ಬರದೂ ಒಂದೇ ದೇಹ ಮತ್ತು ಆತ್ಮವೆಂಬಂತೆ ತಣಿದು ಒಬ್ಬರನ್ನೊಬ್ಬರು ತಣಿಸಿ ನಿದ್ದೆಗೆ ಜಾರುವಷ್ಟರಲ್ಲಿ ಮಧ್ಯರಾತ್ರಿಯಾಗಿರುತ್ತಿತ್ತು. ಆದರೆ, ಆ ದಿನ ವಸುಮತಿ ಕೋಣೆಯೊಳಗೆ ಬಂದಿದ್ದನ್ನು ನೋಡಿಯೂ ನೋಡದವನಂತೆ ಓದುತ್ತಿರುವ ಪುಸ್ತಕದಲ್ಲಿ ತನ್ನನ್ನು ತಲ್ಲೀನಗೊಳಿಸಿಕೊಂಡು ಕೂತಿದ್ದ. ಆ ಪುಸ್ತಕವೊಂದನ್ನು ಹೊರತುಪಡಿಸಿ ತನಗೆ ಯಾವ ಬಾಹ್ಯ ಸಂಪರ್ಕವೂ ಇಲ್ಲವೇನೋ ಎನ್ನುವಂತೆ ಅವನು ಮುಗುಮ್ಮಾಗಿ ಇದ್ದದ್ದು ವಸುಮತಿಯ ಕೋಪಕ್ಕೆ ಕಾರಣವಾಗಿತ್ತು. ಆ ಕ್ಷಣಕ್ಕೆ ತಾನು ಹೆಣ್ಣೆಂಬ ಸಂಕೋಚವನ್ನು ಬಿಟ್ಟು ಅವನನ್ನು ಕೇಳಿದ್ದಳು, 'ಪ್ರಭ್, ನಿಮಗೆ ನೆನಪಿದೆಯಾ ನಾವಿಬ್ಬರೂ ಸೇರಿ ಎಷ್ಟು ದಿನಗಳಾಯ್ತು ಅಂತ'. ವಸುಮತಿಯ ಪ್ರಶ್ನೆಗೆ ಯಾವ ಅಳುಕು ಅನುಮಾನವಿಲ್ಲದೆ ಪ್ರಭಂಜನ ಉತ್ತರಿಸಿದ್ದ, 'ವಸು ಇಪ್ಪತ್ತು ವರ್ಷಗಳಿಂದ ಇದೇ ಮನೆಯಲ್ಲಿ ಒಟ್ಟಾಗಿ ಬಾಳ್ತಿದ್ದಿವಿ, ಇದೇನು ಹೊಸದಾಗಿ ಕೇಳ್ತಿದ್ದಿ'. ಪ್ರಭಂಜನನ ಮಾತು ತನ್ನ ಪ್ರಶ್ನೆಗೆ ಉತ್ತರವೋ ಇಲ್ಲ, ಅವನೇ ತನ್ನನ್ನು ಪ್ರಶ್ನಿಸುತ್ತಿರುವನೋ ಎನ್ನುವ ಗೊಂದಲಕ್ಕೊಳಗಾದ ವಸುಮತಿಗೆ ಪ್ರಭಂಜನನ ನಿರ್ಲಿಪ್ತತೆ ಅರಿವಾಗಲು ಕೆಲವು ಕ್ಷಣಗಳೇ ಬೇಕಾದವು. 'ಪ್ರಭ್, ನನ್ನ ಮಾತಿನ ಅರ್ಥ ನಾವಿಬ್ಬರೂ ಒಟ್ಟಿಗೆ ಸೇರಿ ಐ ಮೀನ್ ಇಂಟರ್‌ಕೋರ್ಸಿಗೆ ಒಳಗಾಗಿ.' ಈ ಸಲ ವಸುಮತಿ ಸಂಕೋಚವನ್ನು ಮುರಿದು ನೇರವಾಗಿಯೇ ಪ್ರಶ್ನಿಸಿದ್ದಳು. ವಸುಮತಿಯ ನೇರವಾದ ಆಕ್ರಮಣಕ್ಕೆ ಪ್ರಭಂಜನನ ನಿರುತ್ಸಾಹ ಮತ್ತು ನಿರುತ್ತರವೇ ಪ್ರತಿಕ್ರಿಯೆಯಾಗಿತ್ತು. ಪ್ರಭಂಜನನ ವರ್ತನೆಯಿಂದ ಆ ರಾತ್ರಿ ವಸುಮತಿಗೆ ಭವಿಷ್ಯ ಅಂಧಕಾರದಲ್ಲಿ ಮುಳುಗಿದಂತಾಗಿ ನಿದ್ದೆ ಹತ್ತಿರ ಸುಳಿಯದೆ ಅವಳ ಮನಸ್ಸು ಒಂದುರೀತಿಯ ಕ್ಷೋಭೆಯಿಂದ ನರಳಿತು.

★★★

ನಗರದ ಅನುದಾನಿತ ಕಾಲೇಜಿನಲ್ಲಿ ಸಮಾಜಶಾಸ್ತ್ರದ ಪ್ರಾಧ್ಯಾಪಕನಾಗಿ ಕೆಲಸ ಮಾಡುತ್ತಿರುವ

